5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂಃ10038/2021

ಪಿಡಬ್ಲೂ- 10
ಸಿಡಬ್ಲೂ- 14

| | | |
|---|---|---|
| ಸಾಕ್ಷಿ ಹೆಸರು | - | ಡಾಃ ಎ. ರಾಜ |
| ತಂದೆ ಹೆಸರು | - | ಡಾಃ ವಿ ಎಸ್ ಅಣ್ಣಾ ಸ್ವಾಮಿ |
| ವಯಸ್ಸು | - | 73 ವರ್ಷ |
| ಉದ್ಯೋಗ | - | ಸೀನಿಯರ್ ಕನ್ಸಲ್ಟೆಂಟ್ ನ್ಯೂರೋ ಸರ್ಜನ್, ಆದರ್ಶ ಆಸ್ಪತ್ರೆ, ಉಡುಪಿ |
| ವಿಳಾಸಃ | - | ಮಣಿಪಾಲ್ |

ಪ್ರಮಾಣ ವಚನ ಭೋದಿಸಿದ ದಿನಾಂಕಃ 21-12-2023

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನಾನು ಆಗಸ್ಟ್ 2010 ರಿಂದ ಇಲ್ಲಿಯವರೆಗೆ ಸೀನಿಯರ್ ಕನ್ಸಲ್ಟೆಂಟ್ ನ್ಯೂರೋ ಸರ್ಜನ್ ಆಗಿ ಆದರ್ಶ ಆಸ್ಪತ್ರೆ ಉಡುಪಿಯಲ್ಲಿ ಕೆಲಸ ಮಾಡುತ್ತಿದ್ದೇನೆ.

ಚಾಸಾ2 ಸತೀಶ ರವರು ನಮ್ಮ ಅಸ್ಪತ್ರೆಯಲ್ಲಿ ಒಳರೋಗಿಯಾಗಿ ಹಾಸ್ಪಿಟಲ್ ನಂಃ 171288 ರಲ್ಲಿ ದಿನಾಂಕಃ 27-07-2019 ರಿಂದ 26-10-2019 ರವರೆಗೆ ಚಿಕಿತ್ಸೆ ಪಡೆದಿರುತ್ತಾರೆ. ಸದರಿ ಚಾಸಾ-2 ರವರು ಮೊದಲೇ ಆಪರೇಷನ್ ಆಗಿ ನಮ್ಮ ಆಸ್ಪತ್ರೆಗೆ ಬಂದಾಗ ಅವರಿಗೆ ತಲೆಗೆ ಮೆದುಳಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು ಬೇರೆ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಪಡೆದು ಬಂದಿರುತ್ತಾರೆ. ಅದೇ ರೀತಿ ಚಾಸಾ-2 ರವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಅವರ ದೇಹದ ಬಲಭಾಗದಲ್ಲಿ ವೀಕ್‌ನೆಸ್ ಇತ್ತು. ಚಾಸಾ2 ರವರು ತನ್ನ ದಿನನಿತ್ಯದ ಕಾರ್ಯಗಳಿಗೆ ತಾನು ಸ್ವಂತವಾಗಿ ಮಾಡಿಕೊಳ್ಳಲು ಸಾಧ್ಯವಿರಲಿಲ್ಲ, ಇತರರನ್ನು ಅವಲಂಬಿಸಿದ್ದರು. ಒಂದು ವರ್ಷ ಆದ ನಂತರ ಚಾಸಾ-2 ರವರನ್ನು ನಾನು ಪರೀಕ್ಷೆ ಮಾಡಿದಾಗ ಆತನಿಗೆ ನ್ಯೂರೋ ಸಮಸ್ಯೆ ತುಂಬಾ ಇದ್ದದ್ದರಿಂದ ಆತನಿಗೆ ವಾಸಿಯಾವ ಅವಕಾಶ ಕಡಿಮೆ ಇರುತ್ತದೆ. ಈ ಬಗ್ಗೆ ನಾನು

ಚಾಸಾ-2 ರವರಿಗೆ ಪ್ರಮಾಣಪತ್ರ ನೀಡಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ -11 ಎಂದು ಸಾಕ್ಷಿಯ ಸಹಿಯನ್ನು ನಿಪಿ 11(ಎ) ಎಂದು ಗುರುತಿಸಲಾಯಿತು. ಚಾಸಾ-2 ರವರನ್ನು ನ್ಯಾಯಾಲಯದ ಮುಂದೆ ನೋಡಿದರೆ ಗುರುತಿಸಬಹುದಾ ಎಂದರೆ ಸಾಕ್ಷಿಯು ಆಗುವುದಿಲ್ಲ ಕಾರಣ ನಿಪಿ -11 ನೀಡಿದ ನಂತರ ಚಾಸಾ-2 ಮುಂದಿನ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬರಲಿಲ್ಲ ಎಂದಕು ನುಡಿಯುತ್ತಾರೆ.

<u>ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದಃ</u>

ನಿಪಿ-11 ರಲ್ಲಿ ಹೇಳಿದಂತಹ ತಲೆಗೆ ಆದಂತಹ ಗಾಯ ಜೆ ಸಿ ಬಿ ಬಕೆಟ್ ನಿಂದ ತಾಗಿದರೆ ಅಂತಹ ಗಾಯ ಆಗುವ ಸಾಧ್ಯತೆ ಇದೆ. ಚಾಸಾ-2 ರವರಿಗೆ ಬೇರೆ ಯಾವ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯಾಗಿತ್ತು ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).